ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD
ISSN: 2582-2284
Vol-3 Issue 2, Sep-Oct, 150-154
©*IIMRD*, Mysuru

IIMRD JOURNALS

www.iimrd.com

# ಹೊಸಪೇಟೆ ತಾಲೂಕಿನ ನಗರ ಪ್ರದೇಶದಲ್ಲಿ ನೆಲೆಸಿರುವ ದೇವದಾಸಿಯರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳು

**ಅಂಜಿನಪ್ಪ ಗಡಾದ***

*ಸಂಶೋಧನಾ ವಿದ್ಯಾರ್ಥಿ, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

***ಸಾರಾಂಶ* (Abstract)**

*ಮಾನವನು ಪೂರ್ವದಿಂದಲೂ ವಿವಿಧ ರೀತಿಯ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ನಂಬಿಕೆ ಮತ್ತು ಆಚರಣೆಗಳಿಂದ ಬದುಕುತ್ತಿದ್ದಾನೆ. ಕೆಲವು ನಂಬಿಕೆ ಮತ್ತು ಆಚರಣೆಗಳು ಮೌಢ್ಯತೆಯಿಂದ ಕೂಡಿವೆ. ಅಂತಹ ಆಚರಣೆಗಳಲ್ಲಿ ದೇವದಾಸಿ ಪದ್ಧತಿಯೂ ಕೂಡ ಒಂದು. ದೇವರ ಹೆಸರಲ್ಲಿ ಪೂಜಾರಿಗಳು, ಊರಿನ ಮುಖ್ಯಸ್ಥರು, ಆಡಳಿತಾತ್ಮಕ ಮತ್ತು ಇನ್ನಿತರೆ ವ್ಯಕ್ತಿಗಳು ಸ್ತ್ರೀಯರನ್ನು ದೈಹಿಕವಾಗಿ ಬಳಸಿಕೊಂಡಿರುವುದು ಕಂಡುಬರುತ್ತದೆ. ದೇವದಾಸಿ ಪದ್ಧತಿಗೂ ವೇಶ್ಯಾವಾಟಿಕೆಗೂ ಮೊದಮೊದಲು ನೇರ ಸಂಬಂಧವಿರಲಿಲ್ಲ. ಮೊದಲು ದೇವಸ್ಥಾನದ ಅಂಗಭೋಗದ ದಾಸಿಯರೆಂದು ಮತ್ತು ರಂಗಭೋಗದ ದಾಸಿಯರೆಂದು ಕರೆಯಲಾಗುತ್ತಿತ್ತು. ಪ್ರಸ್ತುತ ಲೇಖನದಲ್ಲಿ ದೇವದಾಸಿಯರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ವಿವರಿಸಲಾಗಿದೆ.*

***ಮುಖ್ಯಪದಗಳು* (Keywords):** ಆರ್ಥಿಕ ಜೀವನ, ದೇವದಾಸಿ, ಮೂಢನಂಬಿಕೆ, ರಾಜ ನರ್ತಕಿಯರು, ಲೈಂಗಿಕ ಶೋಷಣೆ, ಸಾಮಾಜಿಕ ಪದ್ಧತಿ.

## ಪೀಠಿಕೆ

ದೇವದಾಸಿ ಪದ್ಧತಿಯಲ್ಲಿ ಹದಿಹರೆಯದ ಬಾಲಕಿಯರನ್ನು ಒಂದು ದೇವಸ್ಥಾನಕ್ಕೆ ಅಥವಾ ದೇವರಿಗೆ ಸಮರ್ಪಿಸುವುದು ಅಥವಾ ಮದುವೆ ಮಾಡಿಸುವ ಆಚರಣೆಯಾಗಿದೆ. ಸಮಾಜದ ಅನಿಷ್ಠ ಪದ್ಧತಿಗಳಲ್ಲಿ ಈ ಪದ್ಧತಿಯೂ ಕೂಡ ಒಂದಾಗಿದೆ.  ದೇವದಾಸಿ ಎಂಬ ಪದವನ್ನು ದೇವರ ಸೇವಕಿ ಎಂಬರ್ಥವನ್ನು ಕೊಡುತ್ತದೆ. ದೇವದಾಸಿ ಎಂಬ ಪದಕ್ಕೆ ಭವಾನಿ, ಕೂಡಿಕಾರ್, ಭೋಗಮವಂದಿ, ಜೋಗಿನ್, ತೇವರಿದ್ಯಾರ್, ಜೋಗತಿ ಮತ್ತು ಬಸವಿ ಮೊದಲಾದ ಪದಗಳಿವೆ. ದೇವದಾಸಿಯರನ್ನು ಅಸ್ಸಾಂನಲ್ಲಿ ನಟಿಯರೆಂದು, ಮಹಾರಾಷ್ಟ್ರದಲ್ಲಿ 'ಮುರಳೀಸ್", ಒರಿಸ್ಸಾದಲ್ಲಿ 'ಮಹರೀಸ್" ಎಂದೂ, ಆಂಧ್ರ ಪ್ರದೇಶದಲ್ಲಿ ದೇವಿ, ಭೋಗ ಮಗಳೆಂದು, ಕರ್ನಾಟಕದಲ್ಲಿ ಜೋಗತಿಯರು, ಬಸವಿಯರು ಎಂದು ಕರೆಯಲಾಗುತ್ತದೆ. ಶಾಸನದಲ್ಲಿ ದೊರೆಯುವ ರಾಣಿವಾಸ, ಪೆಂಡವಾಸದ ಸೂಳೆಯರು, ಗಣಿಕೆಯರು ಮುಂತಾದ ಪದಗಳನ್ನು

*Please cite this article as:* *ಅಂಜಿನಪ್ಪ ಗಡಾದ (2021).* ಹೊಸಪೇಟೆ ತಾಲೂಕಿನ ನಗರ ಪ್ರದೇಶದಲ್ಲಿ ನೆಲೆಸಿರುವ ದೇವದಾಸಿಯರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳು. *ಪ್ರತಿಬಿಂಬ: ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 3(2). ಪು.ಸಂ. 150–154*

ಗಮನಿಸಿದಾಗ ಇವರು ರಾಜನೊಂದಿಗೆ ಸಂಬಂಧ ಹೊಂದಿದ್ದು ಉತ್ತಮ ಸ್ಥಿತಿವಂತರಾಗಿದ್ದುದು ಕಂಡುಬರುತ್ತದೆ. ಪ್ರಾಚೀನ ಕಾಲದಲ್ಲಿ ದೇವದಾಸಿ ಪದ್ಧತಿಯು ಹೆಚ್ಚು ಗೌರವ ಸ್ಥಾನವನ್ನು ಪಡೆದಿತ್ತು. ಅದನ್ನು ರಾಜಮಹಾರಾಜರು ಗೌರವಯುತವಾಗಿ ಪೋಷಿಸುತ್ತಿದ್ದರು. ಕಾಲಕ್ರಮೇಣ ಈ ಪದ್ಧತಿಯು ಕೆಳಮಟ್ಟಕ್ಕೆ ಇಳಿದು ವೇಶ್ಯಾವಾಟಿಕೆಯೆಂದು ಪರಿಗಣಿಸಲ್ಪಟ್ಟಿದೆ. ದೇವದಾಸಿಯರು ಕಾಲಾಂತರದಲ್ಲಿ ರಾಜ ಪರಿವಾರಕ್ಕೆ ಸೇರಿಕೊಂಡು ರಾಜ ನರ್ತಕಿಯರಾದರು. ಶ್ರೇಣಿಕೃತ ಸಮಾಜ ವ್ಯವಸ್ಥೆಯಲ್ಲಿ ರಾಜ ನರ್ತಕಿಯರು ಉಚ್ಚ ಕುಲದವರು, ದೇವದಾಸಿಯರಲ್ಲಿ ಕೆಳಜಾತಿಯವರು ಎಂಬ ಭೇದ ಹುಟ್ಟು ಹಾಕಲಾಯಿತು. ಇದರ ಪರಿಣಾಮವಾಗಿ ದೇವದಾಸಿಯರನ್ನು ನೋಡುವ ದೃಷ್ಟಿಕೋನ ಬದಲಾಯಿತು. ದೇವದಾಸಿಯರಲ್ಲಿ ಕಲಾವಿದರಿದ್ದರೂ ಕೂಡ ಅವರನ್ನು ಮುಖ್ಯವಾಹಿನಿಗೆ ತರದೇ ಲೈಂಗಿಕ ತೃಷೆಗೆ ಮಾತ್ರ ಬಳಸಿಕೊಳ್ಳಲು ಆರಂಭಿಸಿದರು. ಪ್ರಸ್ತುತ ಅಧ್ಯಯನಕ್ಕೆ ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನ ನಗರ ಪ್ರದೇಶವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

**ಅಧ್ಯಯನ ಕ್ಷೇತ್ರ**

ಪ್ರಸ್ತುತ ಅಧ್ಯಯನಕ್ಕೆ ಬಳ್ಳಾರಿ ಜಿಲ್ಲೆಯ ಹೊಸಪೇಟೆ ನಗರವನ್ನು ಆರಿಸಿಕೊಳ್ಳಲಾಗಿದೆ. ಹೊಸಪೇಟೆ ತಾಲೂಕು ಬಳ್ಳಾರಿಯ ಪಶ್ಚಿಮ ಭಾಗದಲ್ಲಿದೆ. ಇಲ್ಲಿನ ಜನಸಂಖ್ಯೆ 3,12,897 ಇದ್ದು, ಇಲ್ಲಿನ ಜನಸಾಂದ್ರತೆ ಬಳ್ಳಾರಿ ಜಿಲ್ಲೆಗಿಂತ ಅಧಿಕವಾಗಿದೆ. ಒಟ್ಟು ಜನಸಂಖ್ಯೆಯಲ್ಲಿ ಪರಿಶಿಷ್ಟ ಸಮುದಾಯದ ಜನಸಂಖ್ಯೆ ಶೇ.31%ರಷ್ಟು ಇರುವುದು ಕಂಡುಬರುತ್ತದೆ. ಪ್ರಸ್ತುತ ಹೊಸಪೇಟೆ ನಗರದ 2011ರ ಜನಗಣತಿಯ ಪ್ರಕಾರ ಶೇ.12%ರಷ್ಟು ಸಾಕ್ಷರತೆಯಿರುವುದನ್ನು ಕಾಣಬಹುದಾಗಿದೆ.

ಹೊಸಪೇಟೆ ನಗರದಲ್ಲಿ ಉಕ್ಕಡ ಕೇರಿ, ತಳವಾರಕೇರಿ, ಮ್ಯಾಸಕೇರಿ, ಚೌಡಿಕೇರಿ, ಬಾಣದಕೇರಿ, ಚಿತ್ರಕೇರಿ, ಜಂಭಾನಹಳ್ಳಿಕೇರಿ ಎಂಬ ಪ್ರದೇಶದಲ್ಲಿ ವಾಸಿಸುವ ದೇವದಾಸಿ ಸಮುದಾಯದಕ್ಕೆ ಸೇರಿದ ಮಹಿಳೆಯರ ಆರ್ಥಿಕ ಸ್ಥಿತಿಗತಿಗಳನ್ನು ಅಧ್ಯಯನ ಮಾಡಲಾಗಿದೆ. ಪ್ರಸ್ತುತ ಅಧ್ಯಯನಕ್ಕೆ ಸಂದರ್ಶನ ವಿಧಾನವನ್ನು ಬಳಸಿಕೊಂಡು 120 ಮಹಿಳೆಯರಿಂದ ಮಾಹಿತಿ ಸಂಗ್ರಹಿಸಿ ವಿಶ್ಲೇಷಿಸಲಾಗಿದೆ.

ದೇವದಾಸಿಯರಲ್ಲಿ ವಿಭಕ್ತ ಕುಟುಂಬಗಳ ಪ್ರಮಾಣ ಅಧಿಕವಾಗಿದ್ದು, ಕುಟುಂಬದಲ್ಲಿ ತಾಯಿಯ ಪಾತ್ರ ಪ್ರಮುಖವಾದುದಾಗಿದೆ. ತಾಯಿ ತನ್ನ ಮಕ್ಕಳ ಪಾಲನೆ ಪೋಷಣೆಯ ಜೊತೆಗೆ ಕುಟುಂಬದ ಆರ್ಥಿಕ ರಕ್ಷಣೆಗಾಗಿ ಬೇರೆಯವರ ಹೊಲಗದ್ದೆಗಳಲ್ಲಿ ಕೂಲಿ ಮಾಡುವುದು ಕಂಡು ಬರುತ್ತದೆ. ಇದರೊಂದಿ ಕೋಳಿ ಸಾಕಾಣಿಕೆ, ಕುರಿ ಸಾಕಾಣಿಕೆ, ಮನೆಕೆಲಸ ಮುಂತಾದ ವೃತ್ತಿಗಳನ್ನು ಮಾಡುತ್ತಾ ಮಕ್ಕಳಿಗೆ ಶಿಕ್ಷಣ ಸಂಕಷ್ಟದ ನಡುವೆಯೂ ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸುತ್ತಿದ್ದಾರೆ.

ಅನೇಕ ಸಮಸ್ಯೆಗಳ ನಡುವೆ ಮಹಿಳೆ ತನ್ನ ಕುಟುಂಬ ನಿರ್ವಹಣೆಗೆ ವಿವಿಧ ವೃತ್ತಿಗಳಲ್ಲಿ ತೊಡಗಿಸಿಕೊಳ್ಳದ್ದಾಳೆ. ದೇವದಾಸಿಯರು ಸಾಮಾಜಿಕ ಅರಿವಿನಿಂದಾಗಿ ತಮ್ಮ ಮೂಲ ವೃತ್ತಿ ಅಥವ ದೇವದಾಸಿಯಂಥಹ ಅನಿಷ್ಠ ಪದ್ಧತಿಗಳಿಂದ ವಿಮುಖರಾಗಿ ಇತರ ವೃತ್ತಿಗಳನ್ನು ಅವಲಂಬಿಸಿಕೊಂಡು ಬದುಕು ನಡೆಸುತ್ತಿದ್ದರೂ ಕೂಡ ಸಮಾಜ ನೋಡುವ ದೃಷ್ಟಿಕೋನ ಇನ್ನೂ ಬದಲಾಗಿಲ್ಲ. ನಮ್ಮ ಸಾಮಾಜಿಕ

ವ್ಯವಸ್ಥೆಯಲ್ಲಿ ಅಸಂಘಟಿತ ವಲಯದ ಪಾತ್ರ–ಗಾತ್ರ ಆಗಾಧದುದಾಗಿದೆ. ಈ ವಲಯದಲ್ಲಿ ದುಡಿಮೆಗಾರರ ಪ್ರಮಾಣ ಅತ್ಯದಿಕವಾಗಿದೆ.

**ಕೋಷ್ಟಕ 1: ತಾಲೂಕುವಾರು ಬಳ್ಳಾರಿ ಜಿಲ್ಲೆಯ ದೇವದಾಸಿಯರ ಜನಸಂಖ್ಯೆ**

| ಬಳ್ಳಾರಿ ಜಿಲ್ಲೆಯ ತಾಲ್ಲೂಕುಗಳು | ದೇವದಾಸಿಯರ ಜನಸಂಖ್ಯೆ (2007–08 ವರ್ಷದ ಪ್ರಕಾರ) |
|---|---|
| ಹೂವಿನಹಡಗಲಿ | 978 |
| ಹಗರಿಬೊಮ್ಮನಹಳ್ಳಿ | 1821 |
| ಹೊಸಪೇಟೆ | 2596 |
| ಸಿರುಗುಪ್ಪ | 1069 |
| ಬಳ್ಳಾರಿ | 1279 |
| ಸಂಡೂರು | 968 |
| ಕೂಡ್ಲಿಗಿ | 1022 |
| ಒಟ್ಟು | 9733 |

ಕೋಷ್ಟಕ 1 ರಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಕಂಡುಬರುವ ದೇವದಾಸಿಯರ ಪ್ರಮಾಣವನ್ನು ತೋರಿಸಲಾಗಿದ್ದು, 2007–08ರಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸರ್ವೆ ಪ್ರಕಾರ ಬಳ್ಳಾರಿಯಲ್ಲಿ 9,733 ದೇವದಾಸಿಯರು ಕಂಡು ಬರುತ್ತಾರೆ. ಪ್ರಸ್ತುತ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ಹೊಸಪೇಟೆ ತಾಲೂಕಿನಲ್ಲಿ ಅತ್ಯಧಿಕ ದೇವದಾಸಿಯರು ನೆಲೆಸಿರುವುದನ್ನ ಕಾಣಬಹುದಾಗಿದೆ. ಇಲ್ಲಿ 2,896 ದೇವದಾಸಿಯರು ಕಂಡು ಬರುತ್ತಾರೆ. ಈ ಪ್ರದೇಶದಲ್ಲಿ ಹುಲಿಗಮ್ಮ ದೇವಿ ನೆಲೆಸಿದ್ದು ಇಲ್ಲಿನ ಭಕ್ತರು ಈ ದೇವಿಗೆ ದೇವದಾಸಿಯಾಗಿ ಬಿಡುವ ಪದ್ಧತಿ ರೂಢಿಯಲ್ಲಿತ್ತು. ಹಾಗಾಗಿ ಈ ತಾಲೂಕಿನಲ್ಲಿ ದೇವದಾಸಿಯರ ಪ್ರಮಾಣ ಅಧಿಕವಾಗಿದೆ.

**ಕೋಷ್ಟಕ 2: ದೇವದಾಸಿ ಮಹಿಳೆಯರ ವಯಸ್ಸಿನ ವಿಂಗಡನೆಯ ವಿವರ**

| ವಯೋಗುಂಪು | ಮಾಹಿತಿದಾರರು | ಶೇಕಡವಾರು |
|---|---|---|
| 14–25 | 30 | 25.0% |
| 26–40 | 61 | 51.0% |
| 41–60 | 17 | 14.0% |
| 61–65 | 12 | 10.0% |
| > 65 | – | – |
| ಒಟ್ಟು | 120 | 100.0 |

ಕೋಷ್ಟಕ ಎರಡರಲ್ಲಿ ಅಧ್ಯಯನಕ್ಕೆ ಒಳಪಡಿಸಿರುವ ಮಹಿಳೆಯರ ವಯೋಮಾನದ ವಿವರಗಳನ್ನು ನೀಡಲಾಗಿದೆ. ಕೋಷ್ಟಕದ ಪ್ರಕಾರ ಅತ್ಯಂತ ಹೆಚ್ಚು ಮಹಿಳೆಯರು 26–40 ವಯೋಮಾನದ ಗುಂಪಿಗೆ ಸೇರಿದವರಾಗಿರುವುದನ್ನು ಕಾಣಬಹುದಾಗಿದೆ. ಇನ್ನುಳಿದಂತೆ ಶೇ.25 ರಷ್ಟು ಮಂದಿ 14 ರಿಂದ 25 ರ ವಯೋಮಾನದ ಗುಂಪಿಗೆ ಸೇರಿದವರಾಗಿದ್ದು, ಶೇ.14 41–60 ವಯೋಮಾನದ ಗುಂಪಿಗೆ ಸೇರಿದವರಾಗಿದ್ದಾರೆ.

ಕೋಷ್ಟಕ 3 ರಲ್ಲಿ ದೇವದಾಸಿಯರ ವೃತ್ತಿ ವಿವರವನ್ನು ನೀಡಲಾಗಿದೆ. ಅತ್ಯಂತ ಹೆಚ್ಚಿನ ಮಹಿಳೆಯರು ಕೃಷಿ ಕೂಲಿ ಮತ್ತು ವ್ಯಾಪಾರದಲ್ಲಿ ತೊಡಗಿರುವುದನ್ನು ಕಾಣಬಹುದಾಗಿದೆ. ಬಹುತೇಕ ಮಹಿಳೆಯರು ತಮ್ಮ

**ಕೋಷ್ಟಕ 3: ದೇವದಾಸಿ ಮಹಿಳೆಯರ ವೃತ್ತಿವಿವರ**

| ವೃತ್ತಿ ವಿವರ | ಮಾಹಿತಿದಾರರು | ಶೇಕಡವಾರು |
|---|---|---|
| ಕೃಷಿ | 20 | 16.7 |
| ಕೃಷಿ ಕೂಲಿ | 33 | 27.5 |
| ಕೃಷಿಯೇತರ ಕೂಲಿ | 19 | 15.8 |
| ವ್ಯಾಪಾರ | 33 | 27.5 |
| ಭಿಕ್ಷಾಟನೆ | 15 | 12.5 |
| ಇತರೆ | – | 0.0 |
| ಒಟ್ಟು | 120 | 100.0 |

ಜೀವನ ನಿರ್ವಹಣೆಗೆ ವ್ಯಾಪಾರ ಮಾಡುವವರಲ್ಲಿ ತರಕಾರಿ ವ್ಯಾಪಾರ ಮಾಡುವವರ ಪ್ರಮಾಣ ಅಧಿಕವಾಗಿದೆ. ಇನ್ನುಳಿಂದಂತೆ ಶೇ.15.8 ರಷ್ಟು ಕೃಷಿಯೇತರ ಕೂಲಿ, ಶೇ. 12 ರಷ್ಟು ಮಂದಿ ದೇವಾಲಯ ಮತ್ತೀತರ ಪ್ರದೇಶದಲ್ಲಿ ಬಿಕ್ಷೆ ಮಾಡಿ ಜೀವನ ಸಾಗಿಸುತ್ತಿರುವುದನ್ನು ಅಧ್ಯಯನದಲ್ಲಿ ಗುರುತಿಸಲಾಗಿದೆ.

ಇವರು ಸ್ವಾಭಿಮಾನದ ಬದುಕನ್ನು ಕಟ್ಟಿಕೊಳ್ಳಲು ವಿವಿಧ ರೀತಿಯ ವೃತ್ತಿಗಳಲ್ಲಿ ಆಸಕ್ತಿಯನ್ನು ತೋರಿಸುತ್ತಿದ್ದು, ಸಾಲ ಮಾಡಿ ಕೃಷಿ ಮಾಡುತ್ತಿದ್ದಾರೆ. ತರಕಾರಿ ಮತ್ತು ಇತರ ವ್ಯಾಪಾರ ಕೈಗೊಳ್ಳಲು ಹೆಣ್ಣು ಮಕ್ಕಳು ತಮ್ಮ ಬಂಗಾರದ ವಸ್ತುಗಳನ್ನು ಬ್ಯಾಂಕಿನಲ್ಲಿ ಅಡವಿಟ್ಟು ಸಾಲ ತಂದಿರುವುದನ್ನು ಅಧ್ಯಯನದಲ್ಲಿ ಗುರುತಿಸಲಾಗಿದೆ. ಅಲ್ಲದೇ ಯಾವುದೇ ಕಾರಣಕ್ಕೂ ಪಾರಂಪರಿಕ (ದೇವದಾಸಿ) ವೃತ್ತಿಯಲ್ಲಿ ಮುಂದುವರೆಯಲು ಇಚ್ಛೆ ಪಡದ ಈ ಮಹಿಳೆಯರು ಪ್ರಾಣಿ ಸಾಕಾಣಿಕೆಯಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ವ್ಯಾಪಾರವು ಎಲ್ಲಾ ಕಾಲದಲ್ಲಿ ಒಂದೇ ರೀತಿ ಇರುವುದಿಲ್ಲ ಏಕೆಂದರೆ ಸಾಲ ಪಡೆದವರಿಗೆ ವಾರಕ್ಕೆ ಹಣವನ್ನು ಕಟ್ಟಬೇಕು. ಸಣ್ಣ ಪ್ರಮಾಣದಲ್ಲಿ ತರಕಾರಿ ಖರೀದಿಸಿ ಮಾರಾಟ ಮಾಡುವ ದೇವದಾಸಿಯರಿಗೂ, ಇತರ ವ್ಯಾಪಾರಗಾರರಿಗೂ ವ್ಯತ್ಯಾಸವಿದ್ದು, ವ್ಯಾಪಾರ ಮಾಡಿದರೂ ಜೀವನ ನಿರ್ವಹಣೆ ಕಷ್ಟದಾಯಕವಾಗಿದೆ. ಇವರು ವ್ಯಾಪಾರಕ್ಕೆ 100 ರೂಗಳಿಂದ 1500 ರೂಪಾಯಿಗಳವರೆಗೆ ಬಂಡವಾಳ ಹೂಡುತ್ತಾರೆ. ಇತರ ಸಮುದಾಯದ ವ್ಯಾಪಾರಸ್ಥರು 1000 ರೂಪಾಯಿಗಳಿಂದ 5000 ರೂಪಾಯಿಗಳವರೆಗೂ ಬಂಡವಾಳ ಹೂಡುತ್ತಾರೆ. ದಿನವಿಡಿ ವ್ಯಾಪಾರ ಮಾಡಿದರೂ ಉಳಿಯುವುದು ಅತಿ ಕಡಿಮೆ ಆದಾಯ. ಈ ಕಡಿಮೆ ಆದಾಯದಲ್ಲಿಯೇ ಕುಟುಂಬ ನಿರ್ವಹಣೆ ಮಾಡಬೇಕು. ಇದರ ನಡುವೆ ದಲ್ಲಾಳಿಗಳಿಗೆ ಇಂತಿಷ್ಟು ಕಮೀಷನ್ ಕೊಡಬೇಕೆಂಬ ಅಲಿಖಿತ ನಿಯಮವು ಕೂಡ ಜಾರಿಯಲ್ಲಿದೆ.

ದೇವದಾಸಿಯರು ಸಾಮಾನ್ಯವಾಗಿ ಒಂದೆಡೆ ಸ್ಥಿರವಾಗಿ ವ್ಯಾಪಾರ ಮಾಡುವುದಿಲ್ಲ ಬದಲಿಗೆ ಒಂದು ಬೀದಿಯಿಂದ ಮತ್ತೊಂದು ಬೀದಿಗೆ ಹೋಗುತ ತಲೆ ಮೇಲೆ ತರಕಾರಿ ಬುಟ್ಟಿಯನ್ನು ಹೊತ್ತುಕೊಂಡು ವ್ಯಾಪಾರ ಮಾಡುತ್ತಾರೆ. ಇನ್ನು ಕೆಲವರು ಎತ್ತಿನ ಬಂಡಿ, ಆಟೋ, ಸೈಕಲ್‌ಗಳನ್ನು ಬಾಡಿಗೆಗೆ ಪಡೆದು ವ್ಯಾಪಾರ ಮಾಡುತ್ತಾರೆ.

**ಉಪಸಂಹಾರ**

ಒಟ್ಟಾರೆ ಹೇಳುವುದಾದರೆ ದೇವದಾಸಿ ಎಂಬ ಪದ್ಧತಿಯು ತಳ ಸಮುದಾಯದವರನ್ನು ಶೋಷಿತರನ್ನಾಗಿಸಿ, ದೇವರ ಹೆಸರಿನಲ್ಲಿ ಮುಗ್ಧ ಮಹಿಳೆಯರನ್ನು ವಂಚಿಸುವ ಪದ್ಧತಿಯಾಗಿದೆ. ಹಿಂದಿನಿಂದಲೂ ದೇವರ ಮಕ್ಕಳು, ಸೇವಕರು, ನರ್ತಕಿಯರು ಎಂಬ ಹೆಸರಿನಿಂದ ಊರಿನ ಮುಖಂಡರು,

ಮೇಲ್ಜಾಜಿಯ ಪುರುಷರು, ಆರ್ಥಿಕ ಬಲಾಢ್ಯರು ಇವರನ್ನು ತಮ್ಮ ಲೈಂಗಿಕ ತೃಷೆಗಾಗಿ ಬಳಸಿಕೊಂಡಿರುವುದನ್ನು ಕಾಣಬಹುದಾಗಿದೆ. ಪ್ರಸ್ತುತ ಸರ್ಕಾರವು ಈ ಪದ್ಧತಿಯನ್ನು ನಿಷೇಧಿಸಿದೆ. ಹಾಗೂ ದೇವದಾಸಿಯರ ಅಭಿವೃದ್ಧಿಗೆ ಯೋಜನೆಗಳನ್ನು ರೂಪಿಸಿದೆ. ಆದರೆ ಅರಿವಿನ ಕೊರತೆ ಮತ್ತು ದೇವರ ಬಗೆಗಿನ ಮೂಢ ನಂಬಿಕೆ ಇವರನ್ನು ಸಮಾಜದ ಮುಖ್ಯವಾಹಿನಿಗೆ ತರುವಲ್ಲಿ ಅಡಚಣೆಗಳಾಗಿವೆ. ಹಾಗಾಗಿ ಸಮಾಜದಲ್ಲಿ ಅರಿವು ಮೂಡಿಸಿ ಸ್ವ ಉದ್ಯೋಗವನ್ನು ಕೈಗೊಳ್ಳು ಆರ್ಥಿಕ ಸಹಾಯವನ್ನು ನೀಡಬೇಕಿದೆ. ಆದರೂ ಇತ್ತೀಚಿನ ದಿನಗಳಲ್ಲಿ ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳು, ಸಮುದಾಯದೊಳಗಿನ ಸಂಘಟನೆಗಳ ಸಹಕಾರದಿಂದ ಹೊಸ ತಲೆಮಾರಿನ ಮಕ್ಕಳು ಶಿಕ್ಷಣದೆಡೆಗೆ ಮುಖ ಮಾಡುತ್ತಿರುವುದು ಆಶಾದಾಯಕ ಬೆಳವಣಿಗೆಯಾಗಿದೆ. ಈ ನಿಟ್ಟಿನ

**ಪರಾಮರ್ಶನ ಗ್ರಂಥಗಳು**


- ಆಂಜನಪ್ಪ ಬಿ ಹೆಚ್. (2006). ಮಹಿಳೆ ಮತ್ತು ದುಡಿಮೆ. ಸೃಷ್ಟಿ ಪಬ್ಲೀಕೇಷನ್, ಬೆಂಗಳೂರು.
- ಚನ್ನಕ್ಕ ಪಾವಟೆ. (2006). ಶಾಸನಗಳಲ್ಲಿ ಬೃಹತ್ ಕರ್ನಾಟಕದ ಮಹಿಳೆಯರ ಆರ್ಥಿಕ, ಸಾಮಾಜಿಕ ಆಯಾಮಗಳು. ಸಾಹಿತ್ಯ ಪ್ರಕಾಶನ, ಹುಬ್ಬಳಿ.
- ತಾರಾದೇವಿ ಪಿ ಆರ್. (2006). ಬೆಳಗಾವಿ ಜಿಲ್ಲೆಯ ದೇವದಾಸಿಯರ ಪುನರ್ವಸತಿ: ಒಂದು ಅಧ್ಯಯನ. ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂದ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
- ರೋಹಿಣಿ ಬಿ ಎಮ್.  ನಮಗೂ ಬೇಕು ನಿಮ್ಮಂಥ ಬದುಕು, ಹೊಸ ದಿಗಂತ ದಿನಪತ್ರಿಕೆ ಬೆಂಗಳೂರು.
- ವಿವೇಕಾನಂದ ನಡೋಣಿ. (2007). ದೇವದಾಸಿ ಪುನರ್ವಸತಿ: ಒಂದು ಸಮಾಜಶಾಸ್ತ್ರೀಯ ಅಧ್ಯಯನ. ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂದ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
- ಸಂಜೀವ್ ಕುಮಾರ್ ನಿರ್ಮಲ್ಕಾರ್. (2008). ಹೈದಾರಬಾದ್ ಕರ್ನಾಟಕದಲ್ಲಿ ದೇವದಾಸಿ ಪದ್ಧತಿ, ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂದ, ಗುಲಬರ್ಗ ವಿಶ್ವವಿದ್ಯಾಲಯ, ಗುಲಬರ್ಗಾ.